ವಾರದ ಪತ್ರ

## 'ಗೀತಾ'ಳಿಂದ ನಮಗೆ ಬದಲಾವಣೆ ಬೇಡವೆ?

ಕಲರ್ಸ್ ಕನ್ನಡದ 'ಗೀತಾ' ಎತ್ತ ಸಾಗುತ್ತಿದೆ ಎನ್ನುವುದು ಗೊತ್ತಾಗುತ್ತಿಲ್ಲ. ಈ ಧಾರಾವಾಹಿಯ ತಳ–ಬುಡವೇ ಅರ್ಥವಾಗುತ್ತಿಲ್ಲ. ಅತಿ ಬುದ್ಧಿವಂತೆ, ಎಲ್ಲರಿಗೂ ಚಳ್ಳೆಹಣ್ಣು ತಿನ್ನಿಸುವ ಭಾನುಮತಿ ವಾಮಾಚಾರದ ಮೊರೆ ಹೋಗುವುದನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ಈ ಧಾರಾವಾಹಿ ಮುಗಿಯಿತು ಎನ್ನುವಾಗ್ಗೆ, ಬೇರೆ ಸಮಯದಲ್ಲಿ ಮುಂದುವರಿದಿದೆ. 'ಗೀತಾ'ಳಿಂದ ನಮಗೆ ಬದಲಾವಣೆ ಬೇಡವೆ?

—ಎಂ.ಟಿ. ರಮಾನಂದ ರೆಡ್ಡಿ, ಮದಕರಿಪುರ



## ಬಲವಂತದ ಮಾಘಸ್ನಾನ ಬೇಡ

ಕೆಲದಿನಗಳ ಹಿಂದೆ ಎಲ್ಲ ವಾಹಿನಿಗಳ ಬಹುತೇಕ ಧಾರಾವಾಹಿಗಳಲ್ಲಿ ಗಣೇಶನ ಪ್ರತಿಷ್ಠಾಪನೆ, ಪೂಜೆ, ಗಣಪತಿ ಬಪ್ಪ ಮೋರೆಯಾ... ದೃಶ್ಯಗಳು ಕಂಗೊಳಿಸಿದವು. ಇದೀಗ ದಸರಾ ಸಂಭ್ರಮ. ಮತ್ತೆ ದೇವಿ ಪೂಜೆಯ ದೃಶ್ಯಗಳು ಧಾರಾವಾಹಿಗಳಲ್ಲಿ ರಾರಾಜಿಸುತ್ತಿವೆ. ರಾಜ್ಯೋತ್ಸವ, ದೀಪಾವಳಿ ಬರಲಿದೆ. ಅದಕ್ಕೂ ನಿರ್ದೇಶಕರು ಸಿದ್ಧವಾಗಿರಬಹುದು. ಡಿಸೆಂಬರಿನಲ್ಲಿ ಕ್ರಿಸ್‌ಮಸ್! ಹೀಗಾದರೆ ಹೇಗೆ? ಕಥೆಗೆ ಅವಶ್ಯವಿದ್ದರೆ ಸೇರಿಸಿದರೆ ತೊಂದರೆ ಇಲ್ಲ. ಕಥೆ ತಿರುಚಿ ಬಲವಂತದ ಮಾಘಸ್ನಾನ ಯಾವ ಪುರುಷಾರ್ಥಕ್ಕೆ?

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಸ್ವಾಸ್ಥ್ಯ ಕದಡುವ ಕಥೆಗಳು: ಹೀಗೂ ಉಂಟೆ?

ಯಾವುದೇ ವಾಹಿನಿಯ ಯಾವುದೇ ಧಾರಾವಾಹಿಯ ಕಥೆ ನೋಡಿದರೆ ನಿಜಕ್ಕೂ ಗಾಬರಿ ಆಗುತ್ತದೆ. ಒಂದಲ್ಲಾ ಒಂದು ರೀತಿಯಲ್ಲಿ ಮನೆ–ಮನ ಮುರಿಯುವ ಕಥಾವಸ್ತು ಸಾಮಾನ್ಯ ಆಗಿಬಿಟ್ಟಿದೆ. ಖಳನಾಯಕಿಯರ ಕಾಟ ಊಹೆಗೂ ನಿಲುಕದಷ್ಟು ಬೆಳೆಯುತ್ತಿದೆ. ನಾನಾ ಬಗೆಯ ತಂತ್ರ ಕುತಂತ್ರಗಳನ್ನು ಸೃಷ್ಟಿಸಿ, ಹೀಗೂ ಉಂಟು ಎಂಬಂತೆ ಚಿತ್ರಿಸಲಾಗುತ್ತಿದೆ. ಇದನ್ನು ನೋಡಿದರೆ ನಿಜಕ್ಕೂ ಸಮಾಜಕ್ಕೆ ಮಾರಕ ಆಗುತ್ತಿವೆ ಎಂದೇ ಅನಿಸುತ್ತಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ವಿರುದ್ಧ ಪದದ ವಿರೋಧಾಭಾಸ

ಚಂದನದ 'ಥಟ್ ಅಂತ ಹೇಳಿ'ಯ ವೀಕ್ಷಕರು ನಾವು. 'ಈ ಅಕ್ಷರಗಳನ್ನು ಜೋಡಿಸಿ' ಪ್ರಶ್ನೆಯಲ್ಲಿ, ಸ್ಪರ್ಧಿಗಳು ಕೆಲವು ಬಾರಿ ಸರಿಯುತ್ತರ ಕೊಟ್ಟರೂ ನಿರೂಪಕರು ನಮಗೆ ಎಂಟು ಅಕ್ಷರಗಳು ಬೇಕು ಎಂದು ಹೇಳಿದಾಗ ಅವರು ಗೊಂದಲದಿಂದಲೋ ಹಿಂಜರಿಕೆಯಿಂದಲೋ ಸುಮ್ಮನಾಗಿ ಪುಸ್ತಕ ಕಳೆದುಕೊಳ್ಳುತ್ತಿರುವುದು ಬೇಸರವೆನಿಸುತ್ತಿದೆ. 'ಆನಂದಿಸು' ಪದದ ವಿರುದ್ಧ ಪದಕ್ಕೆ 'ದುಃಖಿಸು' ಎಂದು ಅವರು ಕೊಟ್ಟ ಉತ್ತರ ತಪ್ಪೆಂದು ಹೇಳಿ, 'ದ್ವೇಷಿಸು' ಸರಿಯಾದ ಉತ್ತರ ಎಂದು ಹೇಳಿದರು. ನಮ್ಮ ತಿಳಿವಳಿಕೆಯ ಪ್ರಕಾರ 'ಪ್ರೀತಿಸು'ವಿನ ವಿರುದ್ಧ ಪದ 'ದ್ವೇಷಿಸು'.

—ಪುಷ್ಪಾ ಎನ್.ಕೆ. ರಾವ್, ಉಡುಪಿ

## ಪಾಲಕರ ಬೋಧಕ ಭಗವಂತ

ಝೀ ಕನ್ನಡದ 'ಭೂಮಿಗೆ ಬಂದ ಭಗವಂತ'ದಲ್ಲಿ ಪೋಷಕರು ಹೇಗೆ ತಮ್ಮ ಮಕ್ಕಳ ಮನ ಗೆಲ್ಲಬೇಕು ಎನ್ನುವುದನ್ನು ಹೇಳಿಕೊಟ್ಟಿದ್ದಾರೆ. ತಂತ್ರಜ್ಞಾನ ಯುಗದಲ್ಲಿ ಮಕ್ಕಳ ಆಕರ್ಷಣೆಗಳ ಮೇಲೆ ನಿಯಂತ್ರಣ ಸಾಧಿಸಿ, ಮನೋವಿಕಾಸ ಸಾಧಿಸಲು ಸಾಕಷ್ಟು ಸಲಹೆಗಳು ಸಿಗುತ್ತವೆ. 'ಸನ್ಮಾನ ಬೇರೆಯವರು ಮಾಡ್ಬೇಕು, ಅವಮಾನ ನಾವೇ ಅನುಭವಿಸಬೇಕು' ಅನ್ನುವ ಜನಪ್ರಿಯ ಮಾತನ್ನು ಹೇಳಿದ್ದಾರೆ.

ಮಕ್ಕಳಿಗೆ ಅವರ ಸ್ನೇಹಿತರು ದ್ವೇಷ–ಮತ್ಸರವನ್ನು ಮನಸ್ಸಿನಲ್ಲಿ ಬಿತ್ತಿದರೆ ಅದನ್ನು ಪೋಷಕರು ಹೇಗೆ ನಿಭಾಯಿಸುತ್ತಾರೆ, ಹದಿಹರೆಯದಲ್ಲಿ ಮೊಬೈಲ್ ಹುಚ್ಚಿನ ಜೊತೆ ಗುಟ್ಕಾ, ಧೂಮಪಾನ, ಮದ್ಯಪಾನಕ್ಕೆ ಬಲಿಯಾಗುವುದನ್ನು ತಪ್ಪಿಸಲು ಹೇಗೆ ಎಚ್ಚರ ವಹಿಸಬೇಕು, ಹೇಗೆ ಉತ್ತಮ ಬಾಳು ರೂಪಿಸಿಕೊಳ್ಳಬೇಕು ಎನ್ನುವ ಸಂಗತಿಗಳನ್ನು ಮನಮುಟ್ಟುವಂತೆ ಭಗವಂತನ ಮೂಲಕ ನಿರೂಪಿಸಿದ್ದಾರೆ.

—ರಾಜೇಂದ್ರ ಹೆಗಡೆ, ಹಾವೇರಿ

## 'ಬಿಗ್ ಬಾಸ್' ಆದರೂ ಕಾಗದವನ್ನು ತುಳಿಯಬಾರದು...

ಕಲರ್ಸ್ ಕನ್ನಡದ 'ಬಿಗ್‌ಬಾಸ್ 10'ರಲ್ಲಿ ಸ್ಪರ್ಧಿಗಳಿಗೆ ಅನೇಕ ಸವಾಲುಗಳನ್ನು ನೀಡುತ್ತಾರೆ. ನಾನು ಕಂಡ ಒಂದು ಸಂಚಿಕೆಯಲ್ಲಿ ಇಬ್ಬರ ಕೈಗಳಿಗೆ ಕುಂಡವೊಂದನ್ನು ನೀಡಿ, ಕೈಗಳಿಂದ ಮುಟ್ಟದಂತೆ ವಸ್ತುಗಳನ್ನು ತರಲು ಹೇಳುತ್ತಾರೆ. ಅದರಲ್ಲಿ ನೆಲದ ಮೇಲಿಟ್ಟಿರುವ ಕಾಗದವನ್ನು ಕಾಲಿನಿಂದ ರಾಕೆಟ್ ಮಾದರಿ ಮಡಚಿ ಬುಟ್ಟಿಯಲ್ಲಿ ಹಾಕುವ ಸ್ಪರ್ಧೆ ಇತ್ತು. ಯಾವುದೇ ಕಾಗದ–ಪುಸ್ತಕ ಇದ್ದರೂ ಅದು ಸರಸ್ವತಿ ಸಮಾನ, ತುಳಿಯಬಾರದು ಎಂದು ನಮ್ಮ ಹಿರಿಯರು ನಮಗೆ ಕಲಿಸಿದ್ದಾರೆ. ಆಕಸ್ಮಿಕವಾಗಿ ನಮ್ಮ ಕಾಲು ಕಾಗದ ಅಥವಾ ಪುಸ್ತಕಕ್ಕೆ ತಗುಲಿದರೆ ನಮಸ್ಕರಿಸಿ ಅದನ್ನು ಎತ್ತಿಡುತ್ತೇವೆ. ಇದು ನಮ್ಮಂತಹ ಅನೇಕರ ಮನೋಭಾವ. ಹಾಗಾಗಿ ಜನರ ಮನಸ್ಸಿಗೆ ಬೇಸರವಾಗುವ ಅಥವಾ ಜನರ ಭಾವನೆಗಳಿಗೆ ಧಕ್ಕೆ ತರುವ ಇಂತಹ ಸ್ಪರ್ಧೆಗಳನ್ನು ಆಯೋಜಿಸುವುದು ಬೇಡ.

—ಪತ್ತಂಗಿ ಎಸ್. ಮುರಳಿ, ಬೆಂಗಳೂರು

'ಬಿಗ್ ಬಾಸ್' ಉದ್ದೇಶ ಏನೆಂಬುದೇ ಸಾಮಾನ್ಯ ವೀಕ್ಷಕರಿಗೆ ತಿಳಿಯುವುದಿಲ್ಲ. ಅದರಲ್ಲಿ ಬರುವ ಕೆಲವು ಟಾಸ್ಕ್‌ಗಳು ಬಾಲಿಶವಾಗಿರುತ್ತವೆ ಹಾಗೂ ಸದಭಿರುಚಿಯಿಂದ ಕೂಡಿರುವುದಿಲ್ಲ. ಸಗಣಿ ನೀರಿನ ಸ್ನಾನ ಯಾವ ಶತಮಾನದ ಶಿಕ್ಷೆಯೋ ಗೊತ್ತಿಲ್ಲ. ಇಂತಹ ಅಮಾನವೀಯ ಆಟವನ್ನು ಏಕೆ ಆಡಿಸಬೇಕು? ಅಪಹಾಸ್ಯವನ್ನು ಮನರಂಜನೆ ಎಂದು ಹೇಗೆ ತೆಗೆದುಕೊಳ್ಳಬೇಕು ಎಂದು ಗೊತ್ತಾಗುತ್ತಿಲ್ಲ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

ಜೀವನ ಎಂದರೇನು, ಅದರ ಮೌಲ್ಯವೇನು ಎನ್ನುವುದನ್ನು ಶೋಧಿಸುವ ವ್ಯಕ್ತಿತ್ವದ ಕದನ ಎಂದು ಹೇಳುತ್ತಿರುವ 'ಬಿಗ್ ಬಾಸ್' ಶೋನಲ್ಲಿ ಧೂಮಪಾನಕ್ಕೆ ಅವಕಾಶ ನೀಡಿರುವ ಸಂಗತಿಯನ್ನು ಪ್ರಚಾರ ಮಾಡುವುದು ಎಷ್ಟು ಸರಿ? ತರಕಾರಿ, ದಿನಸಿ ಪದಾರ್ಥಗಳನ್ನು ನೀಡಲು ಆಟ ಆಡಿಸುವ ಅಥವಾ ಕೆಲವೊಮ್ಮೆ ಆರೋಗ್ಯಕಾರಿ ಹಣ್ಣು, ತರಕಾರಿಗಳನ್ನು ಮಿತಿಗೊಳಿಸುವ ಬಿಗ್ ಬಾಸ್, ಸಿಗರೇಟ್ ಕಳಿಸುವುದು ಹಾಸ್ಯಾಸ್ಪದ. ಸ್ಪರ್ಧಿಗಳ ಕೆಟ್ಟ ಚಟಗಳನ್ನು ದೂರ ಮಾಡಲು ಈ ವೇದಿಕೆ ಉಪಯೋಗವಾದರೆ ಒಳಿತು. ಇದರಿಂದ ಸಮಾಜಕ್ಕೂ ಒಳ್ಳೆಯ ಸಂದೇಶ ಸಿಗುತ್ತದೆ. ಅದೇ ನಿಜವಾದ 'ಬಿಗ್ ಬಾಸ್' ಗೆಲುವು.

—ರಂಜನಾ ಭಟ್, ಬೈಂದೂರು